ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurcity.mrc.gov.in ದೂರವಾಣಿ : 2278480, ಫ್ಯಾಕ್ಸ್ 2275106
ಇಮೇಲ್ : itstaff_ulb_tumkur@yahoo.com ಸಾರ್ವಜನಿಕ : 0816-2271200, 2272200

ಸಂಖ್ಯೆ:ತುಮಪಾ/ಕಂಶಾ/ಸಾ.ಪ್ರ/ಸಿಆರ್-15/2024-25 ದಿನಾಂಕ:10.06.2024

ಇವರಿಗೆ,
ಹಿರಿಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಬಾಳನಕಟ್ಟೆ, ತುಮಕೂರು.

ಮಾನ್ಯರೆ,

ವಿಷಯ: ತುಮಕೂರು ಮಹಾನಗರಪಾಲಿಕೆಯ ಸಾರ್ವಜನಿಕ ಪ್ರಕಟಣೆಯನ್ನು ಸುದ್ದಿರೂಪದಲ್ಲಿ ಪ್ರಕಟಿಸುವ ಕುರಿತು.

*****

ವಿಷಯಕ್ಕೆ ಸಂಬಂಧಿಸಿದಂತೆ, ಈ ಪತ್ರದೊಂದಿಗೆ ಲಗತ್ತಿಸಿರುವ ತುಮಕೂರು ಮಹಾನಗರಪಾಲಿಕೆ ಕಛೇರಿಯ ಸಾರ್ವಜನಿಕ ಪ್ರಕಟಣೆಯನ್ನು ಹೆಚ್ಚು ಪ್ರಸರಣ ಇರುವಂತಹ ಸ್ಥಳೀಯ ಮತ್ತು ರಾಜ್ಯ ದಿನಪತ್ರಿಕೆಗಳಲ್ಲಿ ಸುದ್ದಿರೂಪದಲ್ಲಿ ಪಾಲಿಕೆಗೆ ಯಾವುದೇ ವೆಚ್ಚ ಬಾರದಂತೆ ಪ್ರಕಟಿಸಲು ಈ ಮೂಲಕ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ
ತುಮಕೂರು.

Scanned with OKEN Scanner

ತುಮಕೂರು ಮಹಾನಗರಪಾಲಿಕೆ, ತುಮಕೂರು
ವೆಬ್‌ಸೈಟ್ : www.tumkurcity.mrc.gov.in ದೂರವಾಣಿ : 2278480, ಫ್ಯಾಕ್ಸ್ 2275106
ಇಮೇಲ್ : itstaff_ulb_tumkur@yahoo.com ಸಾರ್ವಜನಿಕ : 0816-2271200, 2272200

ಸಂಖ್ಯೆ:ತುಮಪಾ/ಕಂಶಾ/ಸಾ.ಪ್ರ/ಸಿಆರ್-15/2024-25 ದಿನಾಂಕ:10.06.2024

## "ಸಾರ್ವಜನಿಕ ಪ್ರಕಟಣೆ"

ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ಆಸ್ತಿ ಮಾಲೀಕರು/ಆಸ್ತಿ ತೆರಿಗೆದಾರರು/ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ತುಮಕೂರು ಮಹಾನಗರ ಪಾಲಿಕೆಯಿಂದ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರಿಗೆ ದಿನಾಂಕ:29.04.2024ರಂದು ಆಸ್ತಿ ತೆರಿಗೆ ರಿಯಾಯಿತಿಯನ್ನು ವಿಸ್ತರಿಸಲು ಕೋರಿ ಪತ್ರ ಬರೆಯಲಾಗಿತ್ತು. ನಮ್ಮ ಮನವಿಯನ್ನು ಘನ ಕರ್ನಾಟಕ ಸರ್ಕಾರವು ಪುರಸ್ಕರಿಸಿ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ:ನಅಇ69ಎಂಎನಿ2024 ದಿನಾಂಕ:10.06.2024ರಂದು ಆದೇಶ ಮಾಡಿದ್ದು, ಈ ಆದೇಶದಂತೆ ಆಸ್ತಿ ತೆರಿಗೆ ಪಾವತಿಯನ್ನು ಪರಿಣಾಮಕಾರಿಯಾಗಿ ಹೆಚ್ಚಿಸಲು ಹಾಗೂ ಸ್ವಯಂ ತೆರಿಗೆ ಪಾವತಿಯನ್ನು ಉತ್ತೇಜಿಸುವ ಸಲುವಾಗಿ ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ-1976ರ ಕಲಂ 112(ಎ) ರನ್ವಯ ರಾಜ್ಯದ ಮಹಾನಗರಪಾಲಿಕೆಗಳಲ್ಲಿ ಆರ್ಥಿಕ ವರ್ಷದ ಪ್ರಾರಂಭದ 30 ದಿನಗಳಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡಿದ್ದಲ್ಲಿ ಶೇಕಡಾ 5ರಷ್ಟು ರಿಯಾಯಿತಿ ನೀಡಲು ಕಲ್ಪಿಸಿರುವ ಅವಕಾಶದ ಅವಧಿಯನ್ನು ದಿನಾಂಕ:31.07.2024 ರವರೆಗೆ ವಿಸ್ತರಿಸಿ ಆದೇಶಿಸಿದೆ. ಆದುದ್ದರಿಂದ, ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ ಸಮಸ್ತ ಆಸ್ತಿ ಮಾಲೀಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ,
ತುಮಕೂರು.

Scanned with OKEN Scanner